





(6ನೇ ಪುಟದಿಂದ)

ಮಣ್ಣಡಿಕೆ ಮಾರುಕಟ್ಟೆಯಲ್ಲಿ ಕಂಡುಬರುವುದಿಲ್ಲ. ಈ ಹಣ್ಣಿನಿಂದ ವೈನ್ ಮಾಡಬಹುದು. ಕರಾವಳಿಯಲ್ಲಿ ಹಣ್ಣಿನ ತಿರುಳಿನಿಂದ ದೋಸೆ ತಯಾರಿಸುತ್ತಾರೆ. ಮಣ್ಣಡಿಕೆಗೆ ಔಷಧಿಯ ಗುಣ ಇದೆ. ಹಣ್ಣು ಮೂತ್ರವರ್ಧಕ, ಕಫಹರ, ಹೊಟ್ಟೆಹುಳ ನಿವಾರಣೆಗೆ ಸಿದ್ಧೌಷಧ. ಇದರ ಮರದ ಚಕ್ಕೆ ಕಷಾಯವು ಕೆಮ್ಮು, ಜ್ವರ, ಚರ್ಮರೋಗ, ಹೊಟ್ಟೆಸಂಬಂಧಿ ಕಾಯಿಲೆಗಳಲ್ಲಿ ಶಮನಕಾರಿ.

ಇದರ ತೊಗಟೆಯ ಲೇಪನದಿಂದ ಗಾಯ ಗುಣವಾಗುತ್ತದೆ. ಎಲೆಯ ಲೇಪನದಿಂದ ತಲೆನೋವು ವಾಸಿಯಾಗುತ್ತದೆ. ಬೀಜ ಅರೆದು ಹಚ್ಚಿದರೆ ಹುಳಕಡ್ಡಿಯ ಶಮನ. ಹಣ್ಣುಗಳು ಕರುಳಲ್ಲಿ ರಕ್ತಸ್ರಾವ ನಿಲ್ಲಿಸಲು ಸಹಕಾರಿ. ಹಣ್ಣಿನ ಶರಬತ್ ಕುಡಿದರೆ ಕ್ಷಯ ರೋಗದ ದೌರ್ಬಲ್ಯ, ಜ್ವರ, ಶ್ವಾಸಕೋಶಕ್ಕೆ ಸಂಬಂಧಿಸಿದ ರೋಗಗಳು ಪರಿಹಾರವಾಗುತ್ತದೆ ಎಂದು ಆಯುರ್ವೇದದಲ್ಲಿ ಉಲ್ಲೇಖವಿದೆ.

ಹೆಚ್ಚು ಎತ್ತರ ಬೆಳೆಯದ ಮಣ್ಣಡಿಕೆ ಮರ ತೋಟದ ಬದುಗಳಿಗೆ ಅತ್ಯಂತ ಸೂಕ್ತ. ಇದರ ಬೀಜಗಳಿಂದ ಗಿಡಗಳನ್ನು ಮಾಡಬಹುದು. ಅರಣ್ಯ ಮತ್ತು ತೋಟಗಾರಿಕಾ ಇಲಾಖೆ ಈ ಸಸಿಗಳನ್ನು ಬೆಳೆಸಿ ಒದಗಿಸಿದರೆ ಅಳಿವಿನ ಅಂಚಿನಲ್ಲಿ ಇರುವ ಈ ವನಸ್ಪತಿಯನ್ನು ಉಳಿಸಿದಂತಾಗುತ್ತದೆ.